ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆ ಕಲಾಪ ತೆಗೆದುಕೊಳ್ಳಲು ಕಳೆದ ನಾಲ್ಕು ದಿವಸದಿಂದ ಕೇಳುತ್ತಿದ್ದೇವೆ.

ಅಧ್ಯಕ್ಷರು : ಬಂದೆ, ಬಂದೆ, ಈಗ ಇನ್ನೊಂದು ಪ್ರಕಟಣೆಯಿದೆ.

10. ಪ್ರಕಟಣೆ

"ವಿಧಾನ ಪರಿಷತ್ತಿನಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118 ರ ಮೇರೆಗೆ 2014 ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಎರಡನೇ ತಿದ್ದುಪಡಿ ವಿಧೇಯಕವನ್ನು ಈ ದಿನ ದಿನಾಂಕ : 16–12–2014 ರಂದು ಅಂಗೀಕರಿಸಿದೆಯೆಂದು ತಿಳಿಸಿರುತ್ತಾರೆ."

ಶ್ರೀ ಬಿ.ಆರ್. ಪಾಟೀಲ್ : ಈಗ ಶೂನ್ಯ ವೇಳೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ ಟೈಂ ಎಷ್ಟಾಯಿತು ನೋಡಿ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ 12ನೇ ತಾರೀಖಿಗೆ ಹಾಕಿದ್ದೀರಿ. ಮತ್ತೆ 14 ನೇ ತಾರೀಖಿಗೆ ಹಾಕಿದ್ದಿರಿ. 15ನೇ ತಾರೀಖಿಗೂ ಹಾಕಿದಿರಿ. ಈಗ ಮತ್ತೆ ,,,

ಅಧ್ಯಕ್ಷರು : ಆಯಿತು ಈಗ ಏನು ಕೇಳಬೇಕು ಎಂದಿದ್ದೀರೋ ಅದನ್ನು ಈಗ ಕೇಳಿ.

11. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ವಿಷಯ : ಹುತಾತ್ಮರಾದ ಮಲ್ಲಿಕಾರ್ಜುನ ಬಂಡೆಯವರ ಕುಟುಂಬಕ್ಕೆ ಸರ್ಕಾರ ಘೋಷಣೆ ಮಾಡಿದಂತೆ ಸವಲತ್ತುಗಳನ್ನು ಒದಗಿಸುವ ಬಗ್ಗೆ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಿನ್ನೆ 15ನೇ ತಾರೀಖಿಗೆ ಕಳೆದ ವರ್ಷ ಮಲ್ಲಿಕಾರ್ಜುನ ಬಂಡೆಯವರು ಹುತಾತ್ಮರಾಗಿ ಒಂದು ವರ್ಷವಾಯಿತು. ಮಾನ್ಯ ಸರ್ಕಾರದವರು ಬಹಳ ಮುಕ್ತವಾಗಿ ಅವರಿಗೆ ಏನೇನು ಸವಲತ್ತುಗಳು, ಅನುಕೂಲಗಳು, ಸೌಲಭ್ಯಗಳನ್ನು ಮಾಡಿಕೊಡಬೇಕು ಎನ್ನುವುದರ ಬಗ್ಗೆ ತಾವು ಘೋಷಣೆ ಮಾಡಿದ್ದೀರಿ. ತಾವು ಮೊನ್ನೆ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಬಂದಾಗ ಅವರಿಗೆ ಸೈಟ್‌ನ್ನು ಕೊಡುತ್ತೇನೆ ಎಂದು ಹೇಳಿದ್ದೀರಿ. ಬಹಳ ಸಂತೋಷ. ಆದರೆ ಅವರು ಸರ್ಕಾರಿ ಸೇವೆಯಲ್ಲಿದ್ದು ಎಷ್ಟು ವರ್ಷಗಳ ಕಾಲ ಅವರು ಕಾಲ ಕಳೆಯುತ್ತಿದ್ದರೋ ಅಷ್ಟು ವರ್ಷಗಳ ಸಂಬಳವನ್ನು ಕೊಡುತ್ತೇವೆ ಎನ್ನುವಂಥ ಭರವಸೆಯನ್ನು ಕೊಟ್ಟಿದ್ದೀರಿ ಮತ್ತು ಅವರ ಮಕ್ಕಳ ಶಿಕ್ಷಣದ ಸಂಪೂರ್ಣವಾದ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಎನ್ನುವಂಥ ಮಾತನ್ನು ಕೂಡ ತಾವು ಹೇಳಿದ್ದಿರಿ. ಇಲ್ಲಿಯವರೆಗೆ ಮೊನ್ನೆ ಕ್ಯಾಬಿನೆಟ್‌ನಲ್ಲಿ ಸೈಟ್‌ನ್ನು ಕೊಡುವುದರ ಬಗ್ಗೆ

ಪ್ರಕಟ ಮಾಡಿದ್ದನ್ನು ಬಿಟ್ಟರೆ ಬೇರೆ ಯಾವುದೇ ಅನುಕೂಲಗಳನ್ನು ಅವರಿಗೆ ಮಾಡಿಕೊಟ್ಟಿಲ್ಲ. ತಾವು ಮಾತು ಕೊಟ್ಟಿರುವುದರಿಂದ ಮಾತು ಕೊಟ್ಟಂತೆ ನಡೆಯಬೇಕು.

ಅಧ್ಯಕ್ಷರು : ನಿಯಮಾನುಸಾರ ಅವರಿಗೆ ಏನು ಸಿಗಬೇಕೋ ಅವೆಲ್ಲವನ್ನು ಕೊಟ್ಟಿದ್ದೀರೋ ಅಥವಾ ಇಲ್ಲವೋ ಎಂಬ ಬಗ್ಗೆ ಹೇಳಿ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅವತ್ತೇನು ಕೆಲವು ಅಹಿತಕರ ಘಟನೆಗಳು ನಡೆದವೋ, ಆಗ ಅನಾವಶ್ಯಕವಾಗಿ ಅನೇಕ ಅಮಾಯಕರ ಮೇಲೆ ಕೇಸ್‌ಗಳನ್ನು ಹಾಕಿದ್ದಾರೆ. ಅದರಲ್ಲಿ ಅಂಗವಿಕಲರಿದ್ದಾರೆ, ಶಾಲೆಗೆ ಹೋಗುವವರಿದ್ದಾರೆ, ಆಮೇಲೆ ಸರ್ಕಾರಿ ನೌಕರಿಯಲ್ಲಿರುವವರಿದ್ದಾರೆ, ಸಾಕ್ಷಿಗಳ ಹೆಸರನ್ನು ಹೇಳಿದ್ದಾರೆ ಅಧ್ಯಕ್ಷರೆ, ಆ ಸಾಕ್ಷಿಗಳಿಗೂ ಮತ್ತು ಆರೋಪಿಗಳಿಗೂ ಇವತ್ತು ಜಗಳ ಹತ್ತಿಕೊಂಡಿದೆ.

ಅಧ್ಯಕ್ಷರು : ನೋಡಿ ನೀವು ದಯವಿಟ್ಟು ಸೂಕ್ಷ್ಮವಾಗಿ ವಿಷಯ ಪ್ರಸ್ತಾಪ ಮಾಡಬೇಕು. ಅದನ್ನು ಬಿಟ್ಟು ಚರ್ಚೆ ಮಾಡುತ್ತಾ ಹೋದರೆ ಚರ್ಚೆಗೆ ಅವಕಾಶವಿಲ್ಲ. ಉತ್ತರವೇನು ಹೇಳುತ್ತಾರೆ ಅವರು ಹೇಳಲಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಉತ್ತರವನ್ನು ಈಗ ಕೊಡಲಾಗಿದೆ.

ಶ್ರೀ ಬಿ.ಆರ್. ಪಾಟೀಲ್ : ಆ ಸಾಕ್ಷಿಗಳು ಏನು ಹೇಳುತ್ತಾರೆಂದರೆ, ನಮಗೆ ಸಂಬಂಧವಿಲ್ಲ, ಇದು ನಮಗೆ ಗೊತ್ತೇ ಇಲ್ಲ, ಏಕೆ ಸುಮ್ಮನೆ ಜಗಳ ಹಚ್ಚಿಸುತ್ತಾರೆ ಸರ್ಕಾರದವರು ಎನ್ನುತ್ತಾರೆ, ನಾವೇನು ಊರಿನಲ್ಲಿ ಇರಬೇಕೋ ಬಿಡಬೇಕೋ ಅನಾವಶ್ಯಕವಾಗಿ ಸರ್ಕಾರ ಗೊಂದಲದ ವಾತಾವರಣ ನಿರ್ಮಾಣ ಮಾಡಿದ್ದಾರೆ.

ಅಧ್ಯಕ್ಷರು : ಮಾನ್ಯ ಸಚಿವರೆ ಉತ್ತರ ಬೇಗ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಒಟ್ಟಾರೆ ತಾತ್ಪರ್ಯವನ್ನು ಸಭೆಯಲ್ಲಿ ಹೇಳುತ್ತೇನೆ.

1. ಸರ್ಕಾರದಿಂದ 50 ಲಕ್ಷ ಅನುಗ್ರಹ ಪೂರ್ವಕ ಮೊತ್ತ ಸಂದಾಯ ಮಾಡಲಾಗಿದೆ.
2. ಇಲಾಖೆಯಿಂದ ಅನುಗ್ರಹ ಪೂರ್ವಕ ಮೊತ್ತ 5 ಲಕ್ಷ ರೂ. ಸಂದಾಯ ಮಾಡಲಾಗಿದೆ.
3. ಇಲಾಖಾ ವತಿಯಿಂದ ದಿವಂಗತರ ಸೇವೆಗೆ ಸಂಬಂಧಿಸಿದ ಸಾಮಾನ್ಯ ಭವಿಷ್ಯ ನಿಧಿ, ಜೀವ ವಿಮೆ, ಗ್ರಾಚ್ಯುಯಿಟಿ, ಇ.ಜಿ.ಐ.ಎಸ್, ಗಳಿಕೆ ರಜೆ ನಗದೀಕರಣ ಹಾಗೂ ಇನ್ನಿತರ ಸೌಲಭ್ಯಗಳನ್ನು ಮೃತರ ಕುಟುಂಬಕ್ಕೆ ಸಂದಾಯ ಮಾಡಲಾಗಿದೆ.

4. ಸರ್ಕಾರದ ವತಿಯಿಂದ ಮೃತರ 2 ಜನ ಮಕ್ಕಳಿಗೆ 5 ವರ್ಷಗಳ ಕಾಲ ಶಿಕ್ಷಣದ ವೆಚ್ಚವನ್ನು ಭರಿಸುವ ಬಗ್ಗೆ ಈಗಾಗಲೇ ಮಂಜೂರಾತಿ ಪಡೆಯಲಾಗಿದೆ. ಸದರಿಯವರ ಮಕ್ಕಳ ಸಂಪೂರ್ಣ ವಿದ್ಯಾಭ್ಯಾಸದ ಖರ್ಚನ್ನು ಸರ್ಕಾರದಿಂದ ಭರಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ.

5. ದಿವಂಗತರ ಪತ್ನಿಯಾದ ಶ್ರೀಮತಿ ಮಲ್ಲಮ್ಮ @ ಮಧು ಬಂಡೆಯವರಿಗೆ ದಿವಂಗತ ಬಂಡೆಯವರು ಬದುಕಿದ್ದರೆ ಅವರಿಗೆ ಲಭ್ಯವಾಗುತ್ತಿದ್ದ ಪೂರ್ಣ ಪ್ರಮಾಣದ ವೇತನ ಮಂಜೂರು ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

6. ದಿನಾಂಕ : 28–11–2014 ರಂದು ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ದಿವಂಗತರ ಪತ್ನಿ ಶ್ರೀಮತಿ ಮಲ್ಲಮ್ಮ @ ಮಧು ಬಂಡೆಯವರಿಗೆ ಕಲಬುರಗಿ ನಗರದಲ್ಲಿ ನಿವೇಶನ ನೀಡುವ ಬಗ್ಗೆ ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಈಗಾಗಲೇ ಈ ರೀತಿಯಾಗಿ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ತಾವು ಕ್ಯಾಬಿನೆಟ್‌ನಲ್ಲಿ ಆಗಿರುವುದು ಬಿಟ್ಟರೆ ಬೇರೆ ಏನೂ ಆಗಿಲ್ಲವೆಂದು ಹೇಳಿದಿರಿ. ನಾವು ಲಿಖಿತವಾಗಿ ಹೆಚ್ಚಿನ ಮಾಹಿತಿಯನ್ನು ಕೂಡ ಕೊಟ್ಟಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್ : ಅದು ಇನ್ನು ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಗಳು ಆದೇಶ ಮಾಡಿದ್ದಾರೆ. ಅದಕ್ಕೆ ಆರ್ಥಿಕ ಇಲಾಖೆಯವರು ಕೊಕ್ಕೆ ಹಾಕಿದ್ದಾರೆ.

ಅಧ್ಯಕ್ಷರು : ಬಿಡಿ ಸಾಕು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮುಖ್ಯಮಂತ್ರಿಗಳು ಆದೇಶ ಮಾಡಿದ್ದರಿಂದಲೇ ಈ ಆದೇಶ ಹೊರಬಂದಿರುವುದು.

ಶ್ರೀ ಬಿ.ಆರ್. ಪಾಟೀಲ್ : ಆರ್ಥಿಕ ಇಲಾಖೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಆದೇಶವನ್ನು ಒಪ್ಪುತ್ತಿಲ್ಲ. ಇದು ಈ ರೀತಿಯಾದರೆ ಹೇಗೆ ?

ಅಧ್ಯಕ್ಷರು : ಆಯಿತು ಬಿಡಿ, ಏನು ತೀರ್ಮಾನವಾಗಿದೆಯೋ ಅದು ಆಗಿದೆ ಬಿಡಿ. ಅದು ಒಪ್ಪಿದರೆ ಒಪ್ಪುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ : ನಾವು ಎಲ್ಲಾ ರೀತಿಯಾದಂತಹ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್ : ನಿಮಗೆ ಅದನ್ನು ಪರಿಶೀಲನೆ ಮಾಡಿ ಸವಲತ್ತುಗಳನ್ನು ಕೊಡುವುದಕ್ಕೆ ಒಂದು ವರ್ಷ ಬೇಕಾ ?

ಶ್ರೀ ಟಿ.ಬಿ. ಜಯಚಂದ್ರ : ಏನೇನು ಸವಲತ್ತು ಕೊಟ್ಟಿದೆ ಎಂದು ಹೇಳಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್ : ನೀವು ಘೋಷಣೆ ಮಾಡಿ ಬಂದ ಮೇಲೆ ಇನ್ನೂ ಆಗಿಲ್ಲ.

ಅಧ್ಯಕ್ಷರು : ಸಾಕು ಬಿಡಿ, ನೀವು ಏನು ಹೇಳಬೇಕೋ ಹೇಳಿದ್ದಿರಿ, ಸುಮ್ಮನೆ ಕುಳಿತುಕೊಳ್ಳಿ.

2. ವಿಷಯ : ಸೂಳೆಕೆರೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ರಿಪೇರಿ ಮತ್ತು ಅದರ ನಿರ್ವಹಣೆ

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ) : ಮಾನ್ಯ ಅಧ್ಯಕ್ಷರೆ, ಭಾನುವಾರ 14ನೇ ತಾರೀಖು 3.45ರ ಸಮಯದಲ್ಲಿ ಸೂಳೆಕೆರೆ ಏರಿ ಮೇಲೆ ಒಂದು ಅಮರೇಶ್ ಎನ್ನುವ ಖಾಸಗಿ ಬಸ್ ಕೆರೆಯಲ್ಲಿ ಬಿದ್ದು ಮೂರು ಜನ ಸತ್ತಿದ್ದಾರೆ, 42 ಜನರಿಗೆ ಗಾಯಗಳಾಗಿವೆ. ಇನ್ನು ಕೆರೆಯಲ್ಲಿ ಎಷ್ಟು ಜನ ಮುಳುಗಿದ್ದಾರೆಂದು ನಿಖರವಾಗಿ ಗೊತ್ತಿಲ್ಲ, ಹುಡುಕುತ್ತಿದ್ದಾರೆ. ಈಗ ಹೆಣ ಸಿಕ್ಕಿರುವ ಪ್ರಕಾರ ಮೂರು ಎಂದು ಇದೆ. ನನ್ನ ಕ್ಷೇತ್ರದಲ್ಲಿರುವ ಬಸವಾಪಟ್ಟಣ ಠಾಣೆಯಲ್ಲಿ ಈ ಕೇಸ್ ದಾಖಲಾಗಿದೆ. ಸರ್ಕಾರದ ವತಿಯಿಂದ ಮೃತ ಪಟ್ಟ ಒಂದೊಂದು ಕುಟುಂಬದವರಿಗೆ ಮೂರ ಲಕ್ಷ ರೂಪಾಯಿ ಪರಿಹಾರವನ್ನು ಘೋಷಣೆ ಮಾಡಿದ್ದಾರೆ, ನಾನು ಇದನ್ನು ಸ್ವಾಗತಿಸುತ್ತೇನೆ. ಆದರೆ ಗಾಯಗೊಂಡಿರುವ ವ್ಯಕ್ತಿಗಳು ಆಸ್ಪತ್ರೆಯಲ್ಲಿ ಬಹಳ ಜನ ಇದ್ದಾರೆ. ಕೆಲವರು ಮಣಿವಾಲ್‌ಗೆ ಹೋಗಿದ್ದಾರೆ, ಕೆಲವರು ಹೆದರಿಕೊಂಡು ಬಂದಿಲ್ಲ. ಪೊಲೀಸ್ ಠಾಣೆಯಲ್ಲಿ ಯಾರ್ಯಾರು ಗಾಯಗೊಂಡಿರುವವರ ಹೆಸರು ದಾಖಲಾಗಿದೆ, ಅವರಿಗೆ ಪರಿಹಾರ ಕೊಡಬೇಕೆಂದು ಹೇಳುತ್ತೇನೆ. ಈ ರಸ್ತೆಯಲ್ಲಿ ಸೂಚನಾ ಫಲಕಗಳು ಇಲ್ಲ. ಆಮೇಲೆ ರಸ್ತೆ ಬಹಳ ಕೆಟ್ಟು ಹೋಗಿದೆ. ಇದು ಬೃಹತ್ ನೀರಾವರಿ ಇಲಾಖೆಯ ನಿರ್ಲಕ್ಷತನದಿಂದ ಈ ರೀತಿ ಆಗುತ್ತಿದೆ. ಇದು ಬಹಳ ಹಳೆಯ ಕೆರೆ ಇದೆ. ಒಬ್ಬ ಸೂಳೆ ಹೆಸರಿನಲ್ಲಿ ಕಟ್ಟಿಸಿದಂತಹ ಕೆರೆ, ಇದು ವಿಷ್ಯಾದಲ್ಲಿಯೇ ಎರಡನೆಯ ದೊಡ್ಡ ಕೆರೆ. ಇದಕ್ಕೆ ವಿಶೇಷವಾಗಿ ರಸ್ತೆ ರಿಪೇರಿ ಕೆಲಸ ಮತ್ತು ಹಂಪ್ಸ್‌ಗಳನ್ನು ಹಾಕಬೇಕು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಸಾರಿಗೆ ಸಚಿವರು ಬಂದ ಮೇಲೆ ಇವರು ಹೇಳಿರುವ ವಿಚಾರವನ್ನು ಮನದಟ್ಟು ಮಾಡಿ ಉತ್ತರವನ್ನು ಕೊಡಿಸಿ ಕೊಡುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ಇದು ವಿಷ್ಯಾದಲ್ಲಿಯೇ ದೊಡ್ಡ ಕೆರೆ, ಇದರ ನಿರ್ವಹಣೆಯನ್ನು ಯಾರು ಮಾಡುತ್ತಾರೆ ?

ಅಧ್ಯಕ್ಷರು : ಅವರು ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಸಚಿವರಿಂದ ಉತ್ತರವನ್ನು ಕೊಡಿಸಿ ಕೊಡುತ್ತೇನೆ. ರಸ್ತೆ ವಿಚಾರ ಲೋಕೋಪಯೋಗಿ ಇಲಾಖೆಗೆ ಬರುತ್ತದೆ, ಆ ಇಲಾಖೆಗೆ ಈ ವಿಚಾರವನ್ನು ಮುಟ್ಟಿಸುತ್ತೇನೆ.